# **ಕರ್ನಾಟಕ ವಿಧಾನ ಪರಿಷತ್**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **402(460)** |
| ಸದಸ್ಯರ ಹೆಸರು | : | **ಶ್ರೀ ಭೀಮರಾವ್ ಬಸವರಾಜು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| ಉತ್ತರಿಸುವ ದಿನಾಂಕ | : | **30.01.2026** |
| ಉತ್ತರಿಸುವ ಸಚಿವರು | : | **ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆ ಹುಮನಾಬಾದ ಮತಕ್ಷೇತ್ರ ಎನ್ ಹೆಚ್ 65 ರಿಂದ ಸದಲಾಪೂರ ಗ್ರಾಮ ಮತ್ತು ಹಂದ್ರಾಳದಿಂದ ನೀರಗುಡಿವರೆಗೆ ನಿರ್ಮಾಣವಾದ ರಸ್ತೆ ಡಾಂಬರೀಕರಣ ಪೂರ್ತಿಯಾಗಿ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು; | -ಇಲ್ಲ-<br>2021-22 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕ್ರಿಯಾಯೋಜನೆಯನ್ವಯ ಬೀದರ್ ಜಿಲ್ಲೆ ಹುಮನಾಬಾದ ಮತಕ್ಷೇತ್ರದ ಎನ್ ಹೆಚ್ 65 ರಿಂದ ಸದಲಾಪೂರ ಗ್ರಾಮ ಮತ್ತು ಹಂದ್ರಾಳದಿಂದ ನೀರಗುಡಿವರೆಗೆ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ರೂ 188.78 ಲಕ್ಷಗಳ ಅಂದಾಜಿನಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಯು ಕಳಪೆಯಾಗಿರುವ ಬಗ್ಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| (ಆ) | ಕಳಪೆ ಕಾಮಗಾರಿ ಕುರಿತು ಮಾಧ್ಯಮಗಳಲ್ಲಿ ಮತ್ತು ಜನರು ಹೊರಾಟ ಮಾಡಿದ್ದರೂ ಸರ್ಕಾರ ಟೆಂಡರ್ ಪಡೆದಿರುವ ಗುತ್ತಿಗೆದಾರರ ಮೇಲಾಗಲಿ ಮತ್ತು ಅಧಿಕಾರಿಗಳ ಮೇಲಾಗಲಿ ಕ್ರಮ ಕೈಗೊಳ್ಳದಿರಲು ಕಾರಣವೇನು? (ಮಾಹಿತಿ ನೀಡುವುದು) | ಕಳಪೆ ಕಾಮಗಾರಿಯಾಗಿರುವ ಬಗ್ಗೆ ಯಾವುದೇ ದೂರು ಸ್ವೀಕೃತವಾಗದ ಕಾರಣ ಅಧಿಕಾರಿಗಳು/ಗುತ್ತಿಗೆದಾರರ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. |

ಸಂಖ್ಯೆ: ಪಿಡಿಎಸ್ 5 ಹೆಚ್‌ಕೆಡಿ 2026

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.